ಮಡಿಕೇರಿ ತಾಲ್ಲೂಕಿನಲ್ಲಿ ಕೆಲವು ರಸ್ತೆಗಳನ್ನು ಸರ್ವಋತು ರಸ್ತೆಯನ್ನಾಗಿಸುವುದು

2886:(3892)

ಶ್ರೀ ಡಿ.ಎನ್.ಮಾದಪ್ಪ (ಮಡಿಕೇರಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಮಡಿಕೇರಿ ತಾಲ್ಲೂಕಿನ ಜಟ್ಟಿ ಮಾಸಿದಬ್ಬಡ್ಕ ಕಾಂತಬೈಲು ಕಲ್ಲುಗುಂಡಿ ರಸ್ತೆಯ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮವೇನು?

2) ಈ ರಸ್ತೆಯನ್ನು ಅಭಿವೃದ್ಧಿಯಾದಲ್ಲಿ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ನೇರ ಸಂಪರ್ಕ ರಸ್ತೆಯಾಗಲಿರುವುದು ಸರ್ಕಾರಕ್ಕೆ ತಿಳಿದಿದೆಯೇ?

3) ಈ ರಸ್ತೆಯು ಅಭಿವೃದ್ಧಿಗೊಂಡಲ್ಲಿ ಸರ್ವಋತು ರಸ್ತೆಯಾಗಿ ದಕ್ಷಿಣ ಕನ್ನಡ ಜಿಲ್ಲೆಯಿಂದ ತಲಕಾವೇರಿ ಕ್ಷೇತ್ರದ ಹತ್ತಿರದ ರಸ್ತೆಯಾಗಲಿರುವುದರಿಂದ ಸರ್ಕಾರ ಇದರ ಅಭಿವೃದ್ಧಿ ಅನುದಾನವನ್ನು ಹೆಚ್ಚಿಸುವುದೆ?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

1) ಸದರಿ ರಸ್ತೆಯು ಜಿಲ್ಲಾ ಪಂಚಾಯತ್ ರಸ್ತೆ ಆಗಿದ್ದು ಒಟ್ಟು 19.20 ಕಿಮಿ ಉದ್ದವಿದ್ದು, ಕಲ್ಲುಗುಂಡಿ ಕಡೆಯಿಂದ 1996 ಮಾರ್ಚ್ ಅಂತ್ಯದವರೆಗೆ 4.65 ಕಿಮಿ ರಸ್ತೆಯನ್ನು ಡಾಂಬರೀಕರಿಸಿದ್ದು, ಚೆಟ್ಟಿ ಮಾಸಿ ಕಡೆಯಿಂದ 6.05 ಕಿಮಿ ಉದ್ದ ಡಾಂಬರೀಕರಣಗೊಂಡಿದ್ದು, ಉಳಿದ 8.50 ಕಿಮಿ ಉದ್ದದ ಮಧ್ಯಭಾಗದ ರಸ್ತೆಯನ್ನು ಅಭಿವೃದ್ಧಿಪಡಿಸಲು ಜಿಲ್ಲೆಗೆ ಒದಗಿಸಿರುವ ಅನುದಾನದಲ್ಲಿ ಹಂತ ಹಂತವಾಗಿ ರಸ್ತೆ ಅಭಿವೃದ್ಧಿ ಕ್ರಮ ಕೈಗೊಳ್ಳಲಾಗುತ್ತಿದೆ;

2) ಹೌದು

3) ಅನುದಾನದ ಲಭ್ಯತೆಯ ಮೇರೆಗೆ ಕ್ರಮ ತೆಗೆದುಕೊಳ್ಳಲಾಗುವುದು.

ಕೊಡಗು ಜಿಲ್ಲೆಯ ಅರಣ್ಯದಲ್ಲಿ ದಾಖಲಾಗಿರುವ ಮೊಕದ್ದಮೆಗಳು.

2888:(3895)

ಶ್ರೀ ಡಿ.ಎನ್.ಮಾದಪ್ಪ (ಮಡಿಕೇರಿ): ಮಾನ್ಯಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉಯವಿಟ್ಟು ಉತ್ತರಿಸುವರೆ?